(ಇಂದು ದಿನಾಂಕಃ 15-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ. ಆರ್ ವಕೀಲರಿಂದ ಃ**

1. ನಾನು ಶಾಲೆ ಕಲಿತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಅದರಲ್ಲಿ ನನ್ನ ಸಹಿ ಇದೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ನನ್ನ ಊರು ಹಾಲಕೂಡ ಇದೆ. ಅಲಕೋಡಾ ಗ್ರಾಮ ಚಿಂಚೋಳಿ ತಾಲೂಕಿನಲ್ಲಿ ಬರುತ್ತದೆ. ನರಸಮ್ಮ ಹಾಲಕೂಡ ಗ್ರಾಮದವರು ಇದ್ದಾರೆ. ನರಸಮ್ಮ ತೀರಿಕೊಂಡು 5 ವರ್ಷ ಆಗಿರಬಹುದು. ಅವರು ಹಾಲಕೂಡ ಗ್ರಾಮದಲ್ಲಿ ತೀರಿಕೊಂಡರು. ನರಸಮ್ಮರವರು ಮೊದಲು ನಿಡಗುಂದಾ ಗ್ರಾಮದಲ್ಲಿ ಇದ್ದರು. ನರಸಮ್ಮರವರು ನಿಡಗುಂದಾಕ್ಕೆ ಯಾವ ವರ್ಷ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನರಸಮ್ಮರವರು ನಿಡಗುಂದಾದ ಕುಂಬಾರ ಗಲ್ಲಿಯಲ್ಲಿ ಇರುತ್ತಿದ್ದರು. ನರಸಮ್ಮರವರು ನಿಡಗುಂದಾ ಗ್ರಾಮದಲ್ಲಿ ಯಾವ ವರ್ಷದವರೆಗೆ ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಈಗ 56 ವರ್ಷ ವಯಸ್ಸು ಇರುತ್ತದೆ. ನನಗೆ ಈಗ 56 ವರ್ಷ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ. ನರಸಮ್ಮ ನನಗಿಂತ ಎಷ್ಟು ವರ್ಷ ದೊಡ್ಡವಳು ಎಂದರೆ ನನಗೆ ಗೊತ್ತಿಲ್ಲ. ಆದರೆ ಅವರು ನನಗಿಂತ ಸುಮಾರು ವರ್ಷ ಹಿರಿಯರಾಗಿದ್ದರು ಎಂದು ಹೇಳುತ್ತಾರೆ. ನಿಡಗುಂದಾದಿಂದ ಹಾಲಕೂಡ ಗ್ರಾಮ 5 ಕಿ.ಮೀಟರ ದೂರದಲ್ಲಿದೆ. ನರಸಮ್ಮರವರು ಸಾಯಪ್ಪನ ಹೆಂಡತಿ ಅಲ್ಲ ಮತ್ತು ವಾದಿ 1 ಮತ್ತು 2 ರವರು ಸಾಯಪ್ಪನ ಮಕ್ಕಳಲ್ಲ ಎಂದು ಗುಲ್ಬರ್ಗಾದ ಕೌಟುಂಬಿಕ ನ್ಯಾಯಾಲಯದಲ್ಲಿ ತೀರ್ಪು ಆಗಿದೆ ಎಂದು ನನಗೆ ಗೊತ್ತಿಲ್ಲ. ನರಸಮ್ಮರವರಿಗೆ ಕತ್ತರಗಿ ಗ್ರಾಮಕ್ಕೆ ನಾಗಣ್ಣ ಎಂಬುವವರ ಜೊತೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ತುಂಬಾ ಚಿಕ್ಕವನಾಗಿದ್ದರಿಂದ ನರಸಮ್ಮನ ಮದುವೆ ಹಾಗೂ ಸಾಯಪ್ಪನ ಮದುವೆ ಯಾರ ಜೊತೆ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಯಪ್ಪ ತೀರಿಕೊಂಡಿರುತ್ತಾರೆ. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಯಪ್ಪ ತೀರಿಕೊಂಡಿರುತ್ತಾರೆ ಎಂದು ನನಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ನರಸಮ್ಮ ಹೇಳಿದ್ದಾರೆ ಎಂದು ನುಡಿಯುತ್ತಾರೆ. ನರಸಮ್ಮ ನನಗೆ ಹೇಳುವ ಮೊದಲು,

ಸಾಯಪ್ಪ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಸಾಯಪ್ಪರವರ ಕುಟುಂಬದ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿ. ನಾಗಮ್ಮ ಹಾಗೂ ಜಾನಕಿರವರ ಮಾತನ್ನು ಕೇಳಿ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರು ನಮ್ಮ ಮನೆಗೆ ಬಂದು ಸಾಕ್ಷಿ ಹೇಳಲು ಹೇಳಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಯಪ್ಪನ ಹೆಂಡತಿ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.